## ಚಿತ್ತ ಕೆತ್ತಿದ ಚಿತ್ರ

'ಕಡಲು ನೋಡಲು ಹೋದವಳು' ಕೃತಿಯ ಮೂಲಕ ಕನ್ನಡ ಸಾಹಿತ್ಯ ಲೋಕದ ಗಮನ ಸೆಳೆದ ಫಾತಿಮಾ ರಲಿಯಾ ದಕ್ಷಿಣ ಕನ್ನಡ ಜಿಲ್ಲೆಯ ಹೆಜಮಾಡಿಯ ನಿವಾಸಿ. ಅವರ ಬರಹಗಳಲ್ಲಿ ಕರಾವಳಿಯ ಬ್ಯಾರಿ ಭಾಷೆಯ ಸೊಗಡು ಅವಿತಿದೆ. ಗದ್ಯ, ಪದ್ಯವನ್ನು ಇಷ್ಟಪಡುವ ಅವರು ಇನ್ಫಾರ್ಮೇಶನ್ ಟೆಕ್ನಾಲಜಿಯಲ್ಲಿ ಎಂಬಿಎ ಪದವೀಧರೆ.

ಕೆಲಸಗಾರ ಎಂದು ಅವನಿಗೆ ಭೂಮಿ ಕೊಡಲೂ ಸಿದ್ದನಾಗುತ್ತಾನೆ. ಅದರ ಅವನ ಅಮ್ಮ ತಡೆದು 'ಹೊಲೆಯರಿಗೇಕೆ ಭೂಮಿ' ಎಂದು ಕೇಳುತ್ತಾಳೆ. ಚೋಮನ ಕನಸು ನುಚ್ಚು ನೂರಾಗುತ್ತದೆ. ಆವತ್ತು ಕೂಲಿಯಾಗಿ ಸಿಕ್ಕಿದ ಅಕ್ಕಿಯನ್ನು ತೆಗೆದುಕೊಂಡು ಬಿರುಮನ ಹೆಂಡದಂಗಡಿಗೆ ಹೋಗುವ ಅವನು ಅದನ್ನು ಪೂರ್ತಿ ಕೊಟ್ಟು ಹೆಂಡ ಖರೀದಿಸುತ್ತಾನೆ. ಇನ್ನೇನು ಬಾಗಿಲು ಮುಚ್ಚಬೇಕು ಅನ್ನುವಷ್ಟರಲ್ಲಿ ಬಂದಿದ್ದ ಚೋಮನಿಗೆ ಹಂಡೆಯ ಅಡಿಯಲ್ಲಿ ಇದ್ದ ಹೆಂಡಕ್ಕೆ ರಾಶಿ ನೀರು ಸುರಿದು ಹಾಗೂ ಹೀಗೂ ಎರಡು ಶೀಷೆ ಮಾಡಿ ಕೊಡುತ್ತಾನೆ ಬಿರುಮ. ಸಿಗುವ ಚೂರು ದುಡ್ಡನ್ನೂ ಹೆಂಡದಂಗಡಿಗೆ ಸುರಿಯುವ ಅವನ ಬಗ್ಗೆ ಸಿಟ್ಟು ಬಂದರೂ, ಇದೊಂದು ಪರಿಸ್ಥಿತಿಯಲ್ಲಿ ಮಾತ್ರ ಚೋಮನಿಗೆ ಹೆಂಡ ಸಿಗಬೇಕಿತ್ತು ಅಂತ ನಮ್ಮ ಮನಸ್ಸು ಆರ್ದ್ರವಾಗುತ್ತದೆ.

ಸ್ವತಃ ಚೋಮನಿಗೇ ಕುಡಿತ ತನ್ನ ಬದುಕನ್ನು ಬಲಿ ತೆಗೆದುಕೊಳ್ಳುತ್ತಾ ಇದೆ, ಇದೇ ದುಡ್ಡನ್ನು ಸಾಲಗಾರರಿಗೆ ಕೊಡಬಹುದಿತ್ತು ಅಂತ ಅನಿಸುತ್ತಿರುತ್ತದೆ, ನಮಗೂ ಅನಿಸುತ್ತದೆ. ಆದರೆ ಚೋಮನ ಕಾಲಮಾನಕ್ಕಿಂತ ಸುಮಾರು ತೊಂಬತ್ತು ವರ್ಷಗಳ ನಂತರದ ಕಾಲಮಾನದಲ್ಲಿ ಕೂತು ಆಧುನಿಕ ಸವಲತ್ತುಗಳನ್ನೂ ಅದು ದೇಹಕ್ಕೆ ಕೊಟ್ಟಿರುವ ಸುಖವನ್ನೂ ಅನುಭವಿಸಿಕೊಂಡು ಚೋಮನನ್ನೂ, ಅವನ ಕುಡಿತವನ್ನೂ, ಅವನ ದುಡಿಯನ್ನೂ, ಅದರ ಶಬ್ದವನ್ನೂ ಪರಾಮರ್ಶಿಸುವ ನನಗೆ ಅವನ ಬದುಕು, ಅದರ ಗಹನತೆ ಅನುಭವಕ್ಕೆ ಸಿಗುವಂಥದ್ದೇ ಅಲ್ಲ.

ಆ ಅನುಭವವನ್ನು ನಮ್ಮ ಚೆನ್ನಪ್ಪಜ್ಜನಲ್ಲೇ ಕೇಳಬೇಕು. ಮೊದಮೊದಲು ನನ್ನ ಪ್ರಶ್ನೆಗಳನ್ನೆಲ್ಲಾ ತಪ್ಪಿಸಿಕೊಂಡು ಓಡಾಡುತ್ತಿದ್ದ ಚೆನ್ನಪ್ಪಜ್ಜ ಈಗ ನಾನು ದೊಡ್ಡವಳಾಗಿದ್ದೇನೆ ಅಂತ ಪದೇ ಪದೇ ಹೇಳಿದ ಮೇಲೆ, ಅದನ್ನು ಅರ್ಧ ಮನಸ್ಸಿನಿಂದಲೇ ಒಪ್ಪಿಕೊಂಡು ನನ್ನೊಂದಿಗೆ ಮಾತಿಗೆ ಕೂರುತ್ತಾರೆ.

'ಒಕ್ಕಲು ಮಸೂದೆ ಅಂತ ಒಂದು ಬಂದ ಮೇಲೆ ನಾವೆಲ್ಲಾ ಮೂರು ಹೊತ್ತಿನ ಅನ್ನ ಕಂಡದ್ದು. ಅದುವರೆಗೆ ದಿನವಿಡೀ ದುಡಿತ, ವರ್ಷ ಪೂರ್ತಿ ದುಡಿಮೆ. ಇಷ್ಟು ' ಅಕ್ಕಿಮುಡಿ' ದಣಿಗಳಿಗೆ ಕೊಡಲೇಬೇಕಿತ್ತು. ಮಳೆ ಕಡಿಮೆ ಆಗಿ ಅಥವಾ ಹೆಚ್ಚಾಗಿ ಬೆಳೆ ಬಾರದೇ ಹೋದರೆ ಮರುವರ್ಷ ಅದಕ್ಕೆ ಬಡ್ಡಿ ಸೇರಿಸಿ ಕೊಡಬೇಕಿತ್ತು. ಜೊತೆಗೆ ವರ್ಷಕ್ಕೊಂದು ಬಾರಿ ಬರುವ ಊರ ಜಾತ್ರೆಗೆ ಮನೆ ತುಂಬಾ ನೆಂಟರಿಷ್ಟರು. ನಾಳೆಗೆಂದು ತೆಗೆದಿಟ್ಟ ಕಾಳು ಧಾನ್ಯದಲ್ಲಿ ಅವರ ಹೊಟ್ಟೆ ತುಂಬಿಸಬೇಕಾದ ದರ್ದು. ನಾಳೆ ಮತ್ತೆ ಉಪವಾಸ' ಎನ್ನುತ್ತಿದ್ದರೆ ಚೋಮನ ಮಗಳು ಬೆಳ್ಳಿ ಎದ್ದು ಬಂದು ಪಕ್ಕ ಕೂತಂತಹ ಭಾವ.

ತನ್ನ ಧಣಿ ಸಂಕಪ್ಪಯ್ಯನವರಲ್ಲಿ ಭೂಮಿ ಸಿಗದು ಎಂದಾದಾಗ ಅವನು ಯಾರದೋ ಮಾತು ಕೇಳಿ ಚರ್ಚಿನ ಪಾದ್ರಿ ಬಳಿ ಹೋಗುತ್ತಾನೆ-ಒಂದು ತುಂಡು ಭೂಮಿಗಾಗಿ. ಅಲ್ಲಿ ಅವರೂ ಕೂಡ ಅವನನ್ನು ನಯವಾಗಿ ಮತಾಂತರಗೊಳ್ಳಲು ಪ್ರೇರೇಪಿಸುತ್ತಾರೆ. ಕ್ರಿಶ್ಚಿಯನ್ನರಿಗೆ ಮಾತ್ರ ನಾವು ಭೂಮಿ ಕೊಡೋದು ಅನ್ನುತ್ತಾರೆ. ಚೋಮ ಏನೂ ಮಾತಾಡದೆ ವಾಪಾಸಾಗುತ್ತಾನೆ. ಅವನ ಅಸಹಾಯಕತೆಯನ್ನು ಯಾರು ಯಾರು ಹೇಗೆಲ್ಲಾ ಬಳಸಬೇಕೋ ಹಾಗೆಲ್ಲಾ ಬಳಸಿಕೊಂಡರು. ಅವನು ಅವರ ಮುಂದೆ ದೈನ್ಯನಾದಂತೆ, ಅಧೀರನಾದಂತೆ ಅವರ 'ಅಹಂ' ಉಬ್ಬುತ್ತಾ ಹೋಗುತ್ತದೆ.

ಚೋಮನ ಬದುಕಿನ ದುರಂತ ಶುರುವಾಗೋದು ಅವನ ಹೊಲತಿ ಸತ್ತಾಗಲೋ, ಅವನು ಕಾಫಿ ತೋಟದ ದೊರೆಗಳಲ್ಲಿ ಸಾಲ ಮಾಡಿದಾಗಲೋ, ತನ್ನ ಮಕ್ಕಳಾದ ಚನಿಯ ಗುರುವರನ್ನು ಸಾಲ ತೀರಿಸಲು ಕಳುಹಿಸಿದಾಗಲೋ, ಗುರುವ ಮಾರಿಯ ಜೊತೆ ಓಡಿಹೋದಾಗಲೋ, ಚನಿಯ ಜ್ವರ ಬಂದು ಅದಕ್ಕೊಂದು ಸರಿಯಾದ ಮದ್ದೂ ಇಲ್ಲದೆ ಸತ್ತು ಹೋದಾಗಲೋ, ಮಗ ನೀಲ ನೀರಿಗೆ ಬಿದ್ದು ಸತ್ತಾಗಲೋ, ಅವನ ಸಾಲ ತೀರಿಸಲೆಂದು ಬೆಳ್ಳಿ